Partnership category in five districts are some other examples of awards received by Karnataka.

81. Once again I seek the co-operation of all the Hon'ble Members in the formulation of progressive policies and implementation of the developmental agenda. It is needless to say that collectively all of you play a critical role in ensuring progress of the State. Together let us make Karnataka as the most citizen friendly and progress oriented State in the country.

JAI HIND

JAI KARNATAKA

(ರಾಷ್ಟ್ರಗೀತೆಯೊಂದಿಗೆ ಸನ್ಮಾನ್ಯ ರಾಜ್ಯಪಾಲರ ಭಾಷಣ ಮುಕ್ತಾಯ ಗೊಂಡಿತು).

(ಸದನವು ಮಧ್ಯಾಹ್ನ 12 ಗಂಟೆ 04ಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಕಾರ್ಯದರ್ಶಿಯವರಿಂದ ವರದಿ.

2. ಕಾರ್ಯದರ್ಶಿಯವರ ವರದಿ:

ಕಾರ್ಯದರ್ಶಿ: ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಈಗ ಸಭೆಯಲ್ಲಿ ಮಂಡಿಸುತ್ತೇನೆ.

(ಅನುಬಂಧ–1)

ವಿಧಾನಮಂಡಲದ ಉಭಯ ಸದನಗಳನ್ನುದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಆವೃತಿ

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಸನ್ಮಾನ್ಯ ಸದಸ್ಯರೇ,

1. ನಿಮ್ಮೆಲ್ಲರಿಗೂ ನಾನು ಹೊಸ ವರ್ಷದ ಮತ್ತು ಸಂಕ್ರಾಂತಿಯ ಶುಭಾಶಯಗಳನ್ನು ಕೋರುತ್ತೇನೆ. ಕರ್ನಾಟಕ ವಿಧಾನ ಮಂಡಲದ ಈ

ಕೆಲಸವನ್ನು ಮಾಡಿದ್ದಾರೆ ಎಂದು ಹೇಳಲು ನಾನು ಹರ್ಷಿಸುತ್ತೇನೆ. ನಕ್ಸಲರ ಸಮಸ್ಯೆಗೆ ಸಂಬಂಧಪಟ್ಟಂತೆ ಸಹ ಈಗಿನ ಪರಿಸ್ಥಿತಿ ಗಣನೀಯವಾಗಿ ಸುಧಾರಿಸಿದೆ. ಈ ವರ್ಷದಲ್ಲಿ ನಕ್ಸಲರ ದಾಳಿ ಅಥವಾ ಚಟುವಟಿಕೆಗಳ ಯಾವುದೇ ಗಂಭೀರ ಪ್ರಕರಣಗಳು ನಡೆದಿಲ್ಲ. ನಕ್ಸಲರ ದಾಳಿಯಲ್ಲಿ ಯಾರೇ ನಾಗರಿಕರು ಹತ್ಯೆಗೊಂಡಿಲ್ಲ. ಮೊಟ್ಟಮೊದಲ ಬಾರಿಗೆ, ಪೊಲೀಸರ ಪ್ರಯತ್ನಗಳಿಂದಾಗಿ ನಾಲ್ಕು ಮಂದಿ ನಕ್ಸಲರು ಶರಣಾಗತರಾಗಿದ್ದಾರೆ.

6. ನನ್ನ ಸರ್ಕಾರ, ಪೊಲೀಸ್ ಇಲಾಖೆಯಲ್ಲಿ ಅನೇಕ ಜನಸ್ನೇಹಿ ಕ್ರಮಗಳನ್ನು ಕೈಗೊಂಡಿದೆ. ಇದನ್ನು ಭಾರತ ಸರ್ಕಾರ ಗುರುತಿಸಿದೆ ಹಾಗೂ ಶ್ಲಾಘಿಸಿದೆ. ಕೇಂದ್ರ ಗೃಹ ಸಚಿವರು ಇಂಥ ಕೆಲವು ಕ್ರಮಗಳನ್ನು ತಮ್ಮಲ್ಲಿಯೂ ಅಳವಡಿಸಿಕೊಳ್ಳುವಂತೆ ರಾಷ್ಟ್ರದ ಇತರ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಉತ್ತಮ ಸೇವಾ ನೀಡಿಕೆಯ ಮೂಲಕ ಜನತೆಯ ವಿಶ್ವಾಸವನ್ನು ಗಳಿಸುವುದು ಈ ಕ್ರಮಗಳ ಧ್ಯೇಯವಾಗಿದೆ.

7. ನನ್ನ ಸರ್ಕಾರ, ನೆರೆಹೊರೆಯ ರಾಜ್ಯಗಳೊಂದಿಗೆ ಸೌಹಾರ್ದಯುತ ಸಂಬಂಧವನ್ನು ಮುಂದುವರೆಸಿಕೊಂಡು ಬಂದಿದೆ ಮತ್ತು ನೆರೆಹೊರೆಯವರೊಂದಿಗೆ ಸೌಹಾರ್ದವನ್ನು ಹಾಳುಗೆಡವುವ ಯಾವುದೇ ವಿಚ್ಛಿದ್ರಕಾರಿ ಗುಂಪುಗಳಿಗೆ ಅವಕಾಶ ನೀಡಿಲ್ಲ.

8. ನನ್ನ ಸರ್ಕಾರದ ಆರ್ಥಿಕ ಪರಿಸ್ಥಿತಿ ಅತ್ಯುತ್ತಮವಾಗಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ. 2010ರ ಡಿಸೆಂಬರ್ ಕೊನೆಯ ವೇಳೆಗೆ ರಾಜಸ್ವ ಸ್ವೀಕೃತಿಯು ರೂ. 38,688 ಕೋಟಿಗಳಿಗೆ ಹೆಚ್ಚಿದೆ ಎಂದರೆ ಕಳೆದ ವರ್ಷ ಇದೇ ಸಮಯದಲ್ಲಿ ಇದ್ದುದಕ್ಕಿಂತ ಶೇ. 20ರಷ್ಟು ಹೆಚ್ಚಾಗಿದೆ. ವಾಣಿಜ್ಯ ತೆರಿಗೆ ವಸೂಲಾತಿಯು ಶೇ. 30ರಷ್ಟು ಹೆಚ್ಚಿದ್ದು, ಇದು ನೆರೆಹೊರೆಯ ರಾಜ್ಯಗಳಿಗಿಂತ ಅತ್ಯಧಿಕವಾಗಿದೆ.

9. ಯೋಜನಾ ವೆಚ್ಚವು ಸಹ ಶೇ. 16ರಷ್ಟು ಎಂದರೆ ರೂ. 14,505 ಕೋಟಿಗಳಷ್ಟು ಹೆಚ್ಚಾಗಿದೆ ಅಲ್ಲದೆ, ನನ್ನ ಸರ್ಕಾರವು ಯೋಜನೇತರ ವೆಚ್ಚದ ಹೆಚ್ಚಳವನ್ನು ಕೇವಲ ಶೇಕಡಾ ಹತ್ತಕ್ಕೆ ಸೀಮಿತಗೊಳಿಸಿದೆ. ಸಂಪನ್ಮೂಲ ಸಂಗ್ರಹ ಮತ್ತು ಯೋಜನೇತರ ವೆಚ್ಚದ ಪ್ರಸಕ್ತ ಪ್ರವೃತ್ತಿಯ

ಹಿನ್ನೆಲೆಯಲ್ಲಿ ನನ್ನ ಸರ್ಕಾರ ಪ್ರಸಕ್ತ ವರ್ಷದ ರೂ. 31,050 ಕೋಟಿ ವಾರ್ಷಿಕ ಯೋಜನೆಯನ್ನು ಸಾಧಿಸುತ್ತದೆಂದು ನಿರೀಕ್ಷಿಸಿದೆ.

10. ನನ್ನ ಸರ್ಕಾರ, ರಾಜ್ಯದ ಅಭಿವೃದ್ಧಿಗಾಗಿ ಅನೇಕ ಕ್ರಮಗಳನ್ನು ಕೈಗೊಂಡಿದೆ. ಹೊಸ ಕ್ರಮಗಳಿಗೆ ಗಮನ ನೀಡಿದುದರ ಪರಿಣಾಮವಾಗಿ ಯೋಜನಾ ವೆಚ್ಚದ ಪಾಲು 1999–2004ರಲ್ಲಿ ಇದ್ದ ಒಟ್ಟು ವೆಚ್ಚದ ಶೇ. 29ರಿಂದ 2008–2011ರಲ್ಲಿ ಶೇ. 40ರಷ್ಟಕ್ಕೆ ಹೆಚ್ಚಿದೆ. ನನ್ನ ರಾಜ್ಯದ ತಲಾವಾರು ಯೋಜನಾ ವೆಚ್ಚವು ರಾಷ್ಟ್ರದಲ್ಲಿಯೇ ಅತ್ಯಧಿಕವಾಗಿದೆ. ಇದು ಕಳೆದ ವರ್ಷದಲ್ಲಿ ರೂ. 4,500 ಗಳಿದ್ದರೆ ಪ್ರಸಕ್ತ ಆರ್ಥಿಕ ವರ್ಷದ ಕೊನೆಯ ವೇಳೆಗೆ ಇದು ತಲಾವಾರು ರೂ. 5,175ರಷ್ಟಕ್ಕೆ ಹೆಚ್ಚುತ್ತದೆಯೆಂದು ನಿರೀಕ್ಷಿಸಲಾಗಿದೆ. ಫಲಾನುಭವಿಗಳಿಗೆ ಅನುಕೂಲಕರವಾದ ಹೊಸ ಯೋಜನೆಗಳು ಮತ್ತು ಜಾರಿಯಲ್ಲಿರುವ ಯೋಜನೆಗಳ ವ್ಯಾಪ್ತಿಯ ವಿಸ್ತರಣೆಯಿಂದಾಗಿ ಸುಮಾರು 1.84 ಕೋಟಿ ವ್ಯಕ್ತಿಗಳಿಗೆ ನೇರವಾಗಿ ಅನುಕೂಲ ಉಂಟಾಗುತ್ತಿದೆ.

11. ಬೆಂಗಳೂರಿನಲ್ಲಿ ಜೂನ್ 2010ರಲ್ಲಿ ನಡೆಸಲಾದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವು ಅತ್ಯಂತ ಯಶಸ್ವಿಯಾಯಿತು. ಸುಮಾರು 8 ಲಕ್ಷ ಜನರಿಗೆ ಉದ್ಯೋಗ ಒದಗಿಸಬಹುದಾದ ನಿರೀಕ್ಷೆಯಲ್ಲಿ 389 ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು. ಡಿಸೆಂಬರ್ 2010ರವರೆಗೆ ನನ್ನ ಸರ್ಕಾರವು ತನ್ನ ನಿಖರವಾದ ಪ್ರಯತ್ನಗಳ ಮೂಲಕ ರಾಜ್ಯದಾದ್ಯಂತ ರೂ. 2.78 ಲಕ್ಷ ಕೋಟಿಗಳ ಒಟ್ಟು ಬಂಡವಾಳ ಹೂಡಿಕೆಯೊಂದಿಗೆ ಸುಮಾರು 180 ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಇತ್ತೀಚಿನ ಅಸೊಚಾಮ್ಸ್ ಬಂಡವಾಳ ಹೂಡಿಕೆ ಮೌಲ್ಯನಿರ್ಧಾರ ವರದಿ ಪ್ರಕಾರ ಕರ್ನಾಟಕವನ್ನು ಇಡೀ ರಾಷ್ಟ್ರದಲ್ಲಿ ಬಂಡವಾಳ ಹೂಡಿಕೆಗೆ ಅತ್ಯಂತ ನೆಚ್ಚಿನ ಸ್ಥಳವನ್ನಾಗಿ ಪರಿಗಣಿಸಲಾಗಿದೆ.

12. ನನ್ನ ಸರ್ಕಾರವು, ಭಾರತದಲ್ಲಿ ಪ್ರಪ್ರಥಮ ಬಾರಿಗೆ, ಬೆಂಗಳೂರಿನಲ್ಲಿ ಜೂನ್ 2011ರಲ್ಲಿ ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಸಂಘಟಿಸಲು ಉದ್ದೇಶಿಸಿದೆ. ರೈತರಿಗೆ ಉತ್ತಮವಾದ ಕೃಷಿಪೂರ್ವದ ಹಾಗೂ ಕೃಷಿ ನಂತರದ ಸಂಪರ್ಕಗಳನ್ನು ಕಲ್ಪಿಸಲು ಶೀಘ್ರದಲ್ಲಿ ಒಂದು ಕೃಷಿ ವ್ಯಾಪಾರ ವ್ಯವಹಾರ ನೀತಿಯನ್ನು

ಹೊರತರಲಾಗುವುದು. ಈ ಕ್ರಮಗಳಿಂದಾಗಿ ನಮ್ಮ ರೈತರ ಜೀವನೋಪಾಯಗಳಿಗೆ ಗಣನೀಯವಾದ ಪ್ರೋತ್ಸಾಹವನ್ನು ನೀಡಿದಂತಾಗುತ್ತದೆ.

13. ಇತ್ತೀಚಿನ ಕೃಷ್ಣಾ ನ್ಯಾಯಾಧಿಕರಣದ ಐತೀರ್ಪು ನನ್ನ ರಾಜ್ಯದ ಜಲಸಂಪನ್ಮೂಲಗಳ ಸಾಮರ್ಥ್ಯವನ್ನು ಹೆಚ್ಚಿಸಿದೆ. ನನ್ನ ಸರ್ಕಾರವು ಈ ಸಾಮರ್ಥ್ಯವನ್ನು ಬಳಸಿಕೊಳ್ಳಲು ಮತ್ತು ನಮ್ಮ ರೈತರಿಗೆ ದೊಡ್ಡ ಪ್ರಮಾಣದಲ್ಲಿ ಪ್ರಯೋಜನವಾಗುವಂತೆ ಮಾಡಲು ಜಲಸಂಪನ್ಮೂಲ ವಲಯದಲ್ಲಿ ದೊಡ್ಡ ಪ್ರಮಾಣದ ಬಂಡವಾಳವನ್ನು ಹೂಡಲು ಯೋಜಿಸಿದೆ. ಈ ದಶಕವನ್ನು (2011–2020) ಕರ್ನಾಟಕದಲ್ಲಿ ಜಲಸಂಪನ್ಮೂಲಗಳ ನಿರ್ವಹಣೆಗೆ ಗಮನ ಹರಿಸುವುದರೊಂದಿಗೆ **"ನೀರಾವರಿ ದಶಕ"** ಎಂಬುದಾಗಿ ಘೋಷಿಸಲಾಗುವುದು. ಅದಕ್ಕನುಸಾರವಾಗಿ ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೂಕ್ತವಾದ ಬೃಹತ್ ಯೋಜನೆಗಳು ಮತ್ತು ವಿಧಾನಗಳನ್ನು ಮುಂಬರುವ ತಿಂಗಳುಗಳಲ್ಲಿ ರೂಪಿಸಲಾಗುವುದು.

14. ನನ್ನ ಸರ್ಕಾರವು, ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ತನ್ನ ಪ್ರಯತ್ನಗಳನ್ನು ಮುಂದುವರಿಸಿದೆ. ಡಾ. ನಂಜುಂಡಪ್ಪ ಸಮಿತಿ ವರದಿ ಪ್ರಕಾರ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ಗುರುತಿಸಲಾದ ಹಿಂದುಳಿದ ತಾಲ್ಲೂಕುಗಳ ಬಗ್ಗೆ ಗಮನ ಹರಿಸಲಾಗುತ್ತಿದೆ. ಸರ್ಕಾರವು ಈವರೆಗೆ ರೂ. 5,243 ಕೋಟಿಗಳ ಮೊತ್ತವನ್ನು ಖರ್ಚು ಮಾಡಿದ್ದು ಪ್ರಸಕ್ತ ಹಣಕಾಸು ವರ್ಷದ ಉಳಿದ ತಿಂಗಳುಗಳಲ್ಲಿ ಸುಮಾರು ರೂ. 1,846 ಕೋಟಿಗಳನ್ನು ಖರ್ಚು ಮಾಡಲು ಯೋಜಿಸಿದೆ.

ರೈತರ ಕಲ್ಯಾಣಕ್ಕೆ ಪ್ರಥಮ ಆದ್ಯತೆ

15. ನನ್ನ ಸರ್ಕಾರವು, ತನ್ನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ರೈತರಿಗೆ ಪ್ರಥಮ ಆದ್ಯತೆ ನೀಡುತ್ತಾ ಬಂದಿದೆ. ಸಹಕಾರಿ ಪತ್ತಿನ ಸಂಘಗಳು/ ಬ್ಯಾಂಕುಗಳ ಮೂಲಕ ಶೇ. 3ರ ದರದಲ್ಲಿ ರೈತರಿಗೆ, ನೇಕಾರರಿಗೆ ಹಾಗೂ ಮೀನುಗಾರರಿಗೆ ಸಾಲಗಳನ್ನು ನೀಡುವ ಯೋಜನೆಯು ಇತರರು ಅನುಸರಿಸಲು ಮಾದರಿಯಾಗಿದೆ. ಪ್ರಸಕ್ತ ವರ್ಷದಲ್ಲಿ ಈಗಾಗಲೇ 8.9

ಲಕ್ಷ ರೈತರಿಗೆ ರೂ. 3,010 ಕೋಟಿಗಳ ಮೊತ್ತದ ಕೃಷಿ ಸಾಲಗಳನ್ನು ವಿತರಣೆ ಮಾಡಲಾಗಿದೆ.

16. ನನ್ನ ಸರ್ಕಾರವು, ಶೇ.1ರ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಹಕಾರಿ ವಲಯದ ಅಡಿಯಲ್ಲಿ ಕೃಷಿ ಸಾಲಗಳನ್ನು ನೀಡುವ ಸಾಧ್ಯತೆಯನ್ನು ಗಂಭೀರವಾಗಿ ಪರಿಶೀಲಿಸಲು ಸಹ ಉದ್ದೇಶಿಸಿದೆ.

17. ಪ್ರಸಕ್ತ ವರ್ಷದಲ್ಲಿ, ಸುಮಾರು 125.78 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ. ಇದು ರಾಜ್ಯದಲ್ಲಿ ದಾಖಲೆ ಸಾಧನೆಯಾಗುತ್ತದೆ. ಈ ವರ್ಷದ ಅವಧಿಯಲ್ಲಿ 25 ಲಕ್ಷ ರೈತರಿಗೆ ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ನೀಡಲಾಗಿದೆ. ಹೆಚ್ಚು ಇಳುವರಿಗೆ ಕಾರಣವಾಗಿರುವ ಭೂ ಚೇತನ ಕಾರ್ಯಕ್ರಮದ ವ್ಯಾಪ್ತಿಗೆ 16 ಜಿಲ್ಲೆಗಳ 12 ಲಕ್ಷ ಹೆಕ್ಟೇರ್‌ಗಳನ್ನು ಒಳಪಡಿಸಲಾಗಿದೆ.

18. ಸಾವಯವ ಕೃಷಿಗೆ ಉತ್ತೇಜನ ನೀಡಲು ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ. 100 ಕೋಟಿಗಳ ಮೊತ್ತವನ್ನು ಮೀಸಲಿಡಲಾಗಿದ್ದು 71,000 ಹೆಕ್ಟೇರ್ ಪ್ರದೇಶವನ್ನು ಸಾವಯವ ಸಾಗುವಳಿ ಅಡಿಯಲ್ಲಿ ಒಳಪಡಿಸಲು ಕ್ರಮ ಕೈಗೊಳ್ಳಲಾಗಿದೆ.

19. ಹೊಸ ಕ್ರಮವಾಗಿ, ಸವಿವರವಾದ ಮಾಹಿತಿಯನ್ನು ಪಡೆಯಲು ರೈತರು ಮತ್ತು ಉದ್ಯಮಿಗಳಿಗೆ ನೆರವಾಗುವ ಧ್ಯೇಯೋದ್ದೇಶದೊಂದಿಗೆ ತೋಟಗಾರಿಕೆ ಪ್ರಯೋಗಾಲಯಗಳು/ ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಕರ್ನಾಟಕ ರಾಜ್ಯವು ರಾಷ್ಟ್ರದ ತೋಟಗಾರಿಕೆ ಕೇಂದ್ರವಾಗಿ ಅಭಿವೃದ್ಧಿ ಹೊಂದುವ ಸಾಮರ್ಥ್ಯವನ್ನು ಹೊಂದಿದೆ. ನನ್ನ ಸರ್ಕಾರವು ಮೇಲಿನ ಧ್ಯೇಯೋದ್ದೇಶವನ್ನು ಸಾಧಿಸಲು ಹೆಚ್ಚು ಯೋಜನೆಗಳನ್ನು ರೂಪಿಸಲು ಪ್ರಯತ್ನಿಸುತ್ತದೆ.

20. 2008–2009ರ ಸಾಲಿನಲ್ಲಿ, ಪ್ರತಿ ಲೀಟರ್ ಹಾಲಿಗೆ 2 ರೂ.ಗಳ ಪ್ರೋತ್ಸಾಹಧನ ಯೋಜನೆಯನ್ನು ಪ್ರಾರಂಭಿಸಲಾಗಿದ್ದು ಅದನ್ನು ರೂ.207 ಕೋಟಿಗಳ ಹಂಚಿಕೆಯೊಂದಿಗೆ 2010–2011ರಲ್ಲೂ ಸಹ ಮುಂದುವರಿಸಲಾಗಿದೆ. ಈ ಯೋಜನೆಯಿಂದ 6.5 ಲಕ್ಷ ಸದಸ್ಯರಿಗೆ ಪ್ರಯೋಜನವಾಗಿದೆ. ಪ್ರಸಕ್ತ ವರ್ಷದಲ್ಲಿ, 39.42 ಲಕ್ಷ ಲೀಟರ್

ಹಾಲಿನ ಉತ್ಪಾದನೆಯಾಗಿದ್ದು ಆ ಮೂಲಕ ಸಹಕಾರಿ ವಲಯದಲ್ಲಿ ಎರಡನೇ ಅತ್ಯಂತ ಹೆಚ್ಚಿನ ಹಾಲು ಉತ್ಪಾದನೆ ರಾಜ್ಯವಾಗಿ ಪರಿಣಮಿಸಿದೆ.

ಜಲಸಂಪನ್ಮೂಲಗಳ ದಕ್ಷ ಬಳಕೆ:

21. ನನ್ನ ಸರ್ಕಾರವು ನೀರಾವರಿ ಹಾಗೂ ಕುಡಿಯುವ ಉದ್ದೇಶಕ್ಕಾಗಿ ನೀರು ದೊರೆಯುವಂತೆ ನೋಡಿಕೊಳ್ಳುವ ಬಗ್ಗೆ ಆದ್ಯತೆ ನೀಡುವುದನ್ನು ಮುಂದುವರಿಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 14 ಸಣ್ಣ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು ಮತ್ತು ವರ್ಷದ ಅಂತ್ಯದೊಳಗೆ 59,000 ಹೆಕ್ಟೇರ್‌ಗಳಷ್ಟು ಹೊಸ ನೀರಾವರಿ ಸಾಮರ್ಥ್ಯವನ್ನು ಸೃಜಿಸುವ ನಿರೀಕ್ಷೆ ಇದೆ.

22. ನನ್ನ ಸರ್ಕಾರ, ದೇಶದಲ್ಲೇ ಮೊತ್ತ ಮೊದಲ ಬಾರಿಗೆ, ನದಿ ಪಾತ್ರದ ಮಟ್ಟದಲ್ಲಿಯೇ ಸಮಗ್ರ ಜನಸಂಪನ್ಮೂಲಗಳ ನಿರ್ವಹಣೆಯನ್ನು ಅನುಷ್ಠಾನಗೊಳಿಸಲು ವಿಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಯೋಜನೆಗಳನ್ನು ಸಿದ್ಧಪಡಿಸುವ ಕ್ರಮವನ್ನು ಕೈಗೊಂಡಿದೆ. ವಿಶ್ವ ಆರ್ಥಿಕ ವೇದಿಕೆಯ (World Economic Forum) ಜಲಸಂಪನ್ಮೂಲ ತಂಡ 2030 ಇದರೊಂದಿಗೆ ಕರ್ನಾಟಕದ ಜಲವಲಯ ಸುಧಾರಣೆಗಳಿಗಾಗಿ ಹಲವಾರು ಕಾರ್ಯತಂತ್ರಗಳನ್ನು ರೂಪಿಸಲು ಒಂದು ಒಡಂಬಡಿಕೆಯನ್ನು ಸಹ ಮಾಡಿಕೊಂಡಿದೆ.

23. ರಾಜ್ಯದಲ್ಲಿ ಕ್ಷೀಣಿಸುತ್ತಿರುವ ಅಂತರ್ಜಲವನ್ನು ನಿಯಂತ್ರಿಸಲು ಮತ್ತು ಸಂರಕ್ಷಿಸಲು ನನ್ನ ಸರ್ಕಾರ ಅಂತರ್ಜಲ ಸಂಪನ್ಮೂಲಗಳ ಬಳಕೆಯನ್ನು ನಿಯಂತ್ರಿಸುವ ಸಲುವಾಗಿ ಒಂದು ಶಾಸನವನ್ನು ರಚಿಸಲು ಉದ್ದೇಶಿಸಿದೆ.

ಎಲ್ಲರಿಗೂ ವಸತಿ:

24. ನನ್ನ ಸರ್ಕಾರ, ಕರ್ನಾಟಕವನ್ನು ಒಂದು ಗುಡಿಸಲುರಹಿತ ರಾಜ್ಯವನ್ನಾಗಿ ಮಾಡುವ ಉದ್ದೇಶವನ್ನು ಹೊಂದಿದೆ. ಅನೇಕ ಯೋಜನೆಗಳ ಅಡಿಯಲ್ಲಿ ಪ್ರಸಕ್ತ ವರ್ಷ ಸುಮಾರು ಮೂರು ಲಕ್ಷ ಮನೆಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. ನನ್ನ ಸರ್ಕಾರವು,

2010–2011ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಎರಡು ಲಕ್ಷ ವಸತಿ ನಿವೇಶನಗಳನ್ನು ಮತ್ತು ನಗರ ಪ್ರದೇಶಗಳಲ್ಲಿ 50,000 ನಿವೇಶನಗಳನ್ನು ವಿತರಿಸಲು ಬದ್ಧವಾಗಿದೆ.

25. ನನ್ನ ಸರ್ಕಾರವು, ಒಂದು ಸಮಗ್ರ ವಸತಿ ನೀತಿಯನ್ನು ರೂಪಿಸಲು ಉದ್ದೇಶಿಸುತ್ತದೆ. ಇದರಿಂದ ರಾಜ್ಯದಲ್ಲಿರುವ ಮನೆಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಸಹಾಯಕವಾಗುತ್ತದೆ. ಈ ಕಾರ್ಯನೀತಿಯು ಅನೇಕ ವರ್ಗದ ವಸತಿ ನಿರ್ಮಾಣವನ್ನು ಒಳಗೊಳ್ಳುತ್ತದೆ ಮತ್ತು ಕೊಳಚೆ ಪ್ರದೇಶಗಳ ಪುನರ್ ಅಭಿವೃದ್ಧಿಯು ಸೇರಿದಂತೆ ಕೈಗೆಟುಕಬಹುದಾದ ಬೆಲೆಯಲ್ಲಿ ಮನೆಗಳನ್ನು ಅಭಿವೃದ್ಧಿಗೊಳಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಕ್ರಮ ಕೈಗೊಳ್ಳುವುದನ್ನು ಒಳಗೊಂಡಿರುತ್ತದೆ.

ಆಸರೆ – ಪ್ರವಾಹ ಸಂತ್ರಸ್ತರಿಗಾಗಿ ಹೊಸ ವಸತಿ ಸಮುಚ್ಚಯಗಳು:

26. ನನ್ನ ಸರ್ಕಾರ, 60,000 ಪ್ರವಾಹ ಸಂತ್ರಸ್ತ ಕುಟುಂಬಗಳಿಗಾಗಿ 294 ಹೊಸ ವಸತಿ ಸಮುಚ್ಚಯಗಳನ್ನು ಅಭಿವೃದ್ಧಿಪಡಿಸುವಂಥ ಬೃಹತ್ ಕಾರ್ಯವನ್ನು ಕೈಗೊಂಡಿದೆ. ಇದು 148 ಗ್ರಾಮಗಳನ್ನು ಸಂಪೂರ್ಣವಾಗಿ ಮತ್ತು 146 ಗ್ರಾಮಗಳನ್ನು ಭಾಗಶ: ಸ್ಥಳಾಂತರಗೊಳಿಸುವ ಹಾಗೂ 59,471 ಮನೆಗಳನ್ನು ನಿರ್ಮಿಸುವ ಕಾರ್ಯವನ್ನು ಒಳಗೊಂಡಿದೆ. ಈ ಮನೆಗಳ ನಿರ್ಮಾಣದಲ್ಲಿ ಗಣನೀಯ ಸಂಖ್ಯೆಯಲ್ಲಿ ಖಾಸಗಿ ದಾನಿಗಳು ತಮ್ಮನ್ನು ತೊಡಗಿಸಿಕೊಂಡಿರುವುದು ಶ್ಲಾಘನೀಯ ಮತ್ತು ಅಂಥ ಎಲ್ಲಾ ದಾನಿಗಳಿಗೆ ನನ್ನ ಸರ್ಕಾರ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಇಚ್ಛಿಸುತ್ತದೆ. ಈಗಾಗಲೇ 285 ಗ್ರಾಮಗಳಲ್ಲಿ ಬಡಾವಣೆಗಳನ್ನು ನಿರ್ಮಿಸಲಾಗಿದೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ಬಾಕಿ ಇರುವುದರಿಂದ 9 ಗ್ರಾಮಗಳಲ್ಲಿ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ. ಸುಮಾರು 47,000 ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿದ್ದು, ಇದೀಗ 10,479 ಮನೆಗಳು ಪೂರ್ಣವಾಗಿ ನಿರ್ಮಾಣಗೊಂಡಿವೆ. ಉಳಿದ ಮನೆಗಳನ್ನು 2011ರ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣ

ಗೊಳಿಸಲಾಗುವುದು. ದೇಶದ ಇನ್ನಾವುದೇ ಭಾಗದಲ್ಲೂ, ಇಷ್ಟು ಕಡಿಮೆ ಅವಧಿಯಲ್ಲಿ ಇಂತಹ ಬೃಹತ್ ಕಾರ್ಯವನ್ನು ಕೈಗೊಳ್ಳಲಾಗಿಲ್ಲ.

ಹೆಚ್ಚಿಸಲಾದ ಇಂಧನ ಪೂರೈಕೆ:

27. ಹಿಂದಿನ ಕೆಲವು ವರ್ಷಗಳಿಗೆ ಹೋಲಿಸಿದರೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಪರಿಸ್ಥಿತಿ ಗಣನೀಯವಾಗಿ ಸುಧಾರಿಸಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಉತ್ಪಾದನಾ ಸಮಸ್ಯೆಗಳನ್ನು ಬಗೆಹರಿಸಲಾಗಿದ್ದು, ಮೊದಲ ಬಾರಿಗೆ 1400 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಖಾಸಗಿ ವಲಯದ ವಿದ್ಯುತ್ ಸ್ಥಾವರದ ಮೊದಲ ಘಟಕವನ್ನು ಪ್ರಾರಂಭಿಸಲಾಗಿದ್ದು, ಗ್ರಿಡ್‌ಗೆ ವಿದ್ಯುತ್ ಪ್ರವಹಿಸಲಾರಂಭಿಸಿದೆ. ಈ ಪ್ರಯತ್ನಗಳು ಹಾಗೂ ವಿದ್ಯುತ್ ಖರೀದಿ ಸೇರಿದಂತೆ ಸರ್ಕಾರದ ಇತರ ವಿವಿಧ ಕ್ರಮಗಳು ವಿದ್ಯುತ್ ಪೂರೈಕೆಯನ್ನು ಗಣನೀಯವಾಗಿ ಹೆಚ್ಚಿಸಿವೆ. ಮೊದಲ ಬಾರಿಗೆ ದಿನವೊಂದಕ್ಕೆ 150 ದಶಲಕ್ಷ ಯೂನಿಟ್‌ಗಳಿಗಿಂತ ಹೆಚ್ಚು ವಿದ್ಯುತ್‌ನ್ನು ಪೂರೈಸಲಾಗುತ್ತಿದೆ.

28. ನನ್ನ ಸರ್ಕಾರವು, ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ತನ್ನ ಪ್ರಯತ್ನವನ್ನು ಮುಂದುವರಿಸಿದೆ. ಛತ್ತೀಸ್‌ಗಡ್ ರಾಜ್ಯದಲ್ಲಿ ಪಿಟ್ ಹೆಡ್ ಥರ್ಮಲ್ ಯೋಜನೆಯ ಸಂಬಂಧದಲ್ಲಿ ಎಲ್. ಅಂಡ್ ಟಿ.ಯೊಂದಿಗೆ ಹಾಗೂ ಬಿಜಾಪುರ ಜಿಲ್ಲೆಯ ಕೊಡ್ಡಿಯಲ್ಲಿ 4000 ಮೆಗಾವ್ಯಾಟ್ ಅಲ್ಟ್ರಾ ಮೆಗಾ ಪವರ್ ಸ್ಥಾವರ ಕುರಿತಂತೆ ಎನ್.ಟಿ.ಪಿ.ಸಿ.ಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. 740 ಕೆಎಂ ದಾಭೋಲ್–ಬೆಂಗಳೂರು ಮಾರ್ಗದ ಅನಿಲ ಕೊಳವೆ ಮಾರ್ಗವನ್ನು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಅಳವಡಿಸಲು, ಅದಕ್ಕೆ ಅಗತ್ಯವಾದ ಎಲ್ಲ ಅನುಮತಿಗಳನ್ನು ದಾಖಲೆ ಸಮಯದಲ್ಲಿ ದೊರಕಿಸಲು ನನ್ನ ಸರ್ಕಾರವು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿದೆ. ಇದರಿಂದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು 2012ರ ಮಾರ್ಚ್ ವೇಳೆಗೆ ಕೊಳವೆ ಮಾರ್ಗ ಕಾರ್ಯಾರಂಭವಾಗುವಂತೆ ಮಾಡಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಇನ್ನು ಮುಂದೆ ಅನಿಲ ಆಧಾರಿತ ವಿದ್ಯುತ್ ಯೋಜನೆಗಳ ಬಗ್ಗೆ ಗಂಭೀರವಾಗಿ ಪರಿಶೀಲಿಸಬಹುದಾಗಿದೆ.

29. ನನ್ನ ಸರ್ಕಾರವು, ವಿದ್ಯುತ್ ವಿತರಣಾ ಕಂಪನಿಗಳ ಮೂಲಕ ರೂ. 2200 ಕೋಟಿ ವೆಚ್ಚದಲ್ಲಿ 'ನಿರಂತರ ಜ್ಯೋತಿ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಇದರಿಂದ ಹಳ್ಳಿಗಳಿಗೆ ಹೆಚ್ಚಾಗಿ ವಿದ್ಯುತ್ ದೊರಕುವುದಲ್ಲದೆ, ನೀರಾವರಿ ಪಂಪ್ ಸೆಟ್‌ಗಳಿಗೆ ಪೂರೈಕೆಯಾಗುವ ವಿದ್ಯುತ್ತಿನ ಗುಣಮಟ್ಟವು ಸುಧಾರಿಸುತ್ತದೆ. ಇದನ್ನು 126 ತಾಲ್ಲೂಕುಗಳಲ್ಲಿ 2 ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

30. ನನ್ನ ಸರ್ಕಾರವು, ಇಂಧನ ಸಂರಕ್ಷಣೆಗೆ ಹಾಗೂ ವಿದ್ಯುತ್ತಿನ ಬೇಡಿಕೆ ನಿರ್ವಹಣೆಗೆ ಆದ್ಯ ಗಮನ ನೀಡಲು ಉದ್ದೇಶಿಸುತ್ತದೆ. ಇದಕ್ಕಾಗಿ ರಾಜ್ಯದಲ್ಲಿ ಸಿಎಫ್‌ಎಲ್ ಮತ್ತು ಎಲ್‌ಇಡಿ ದೀಪಗಳ ಬಳಕೆಯನ್ನು ಪ್ರೋತ್ಸಾಹಿಸಲು ಪ್ರಯತ್ನಗಳನ್ನು ಕೈಗೊಳ್ಳಲಾಗುವುದು.

ಸುಧಾರಿತ ಆರೋಗ್ಯ ರಕ್ಷಣೆ:

31. ನನ್ನ ಸರ್ಕಾರವು, ಆರೋಗ್ಯ ರಕ್ಷಣೆಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಿದೆ. ಕಳೆದ ವರ್ಷ ಗುಲ್ಬರ್ಗಾ ವಿಭಾಗದಲ್ಲಿ ಬಡತನ ರೇಖೆಯ ಕೆಳಗಿನ 14.5 ಲಕ್ಷ ಕುಟುಂಬಗಳನ್ನು ವಾಜಪೇಯಿ ಆರೋಗ್ಯಶ್ರೀ ಆರೋಗ್ಯ ವಿಮಾ ಯೋಜನೆಯಡಿ ತರಲಾಗಿದೆ. ಈ ವರ್ಷ ಇದನ್ನು ಬೆಳಗಾವಿ ವಿಭಾಗಕ್ಕೆ ವಿಸ್ತರಿಸಲಾಗಿದೆ. ಎಲ್ಲಾ ವಿಭಾಗಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಜಿಲ್ಲಾ ಆಸ್ಪತ್ರೆಗಳ ರೋಗಿಗಳ ತೃಪ್ತಿಯ ಮಟ್ಟವನ್ನು ನಿರ್ಧರಣೆ ಮಾಡುವುದಕ್ಕಾಗಿ ಸ್ವತಂತ್ರ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ. ವೈದ್ಯಕೀಯ ಆಂಬ್ಯುಲೆನ್ಸ್ ಸೇವೆಗೆ (ಆರೋಗ್ಯ ಕವಚ) 1.79 ಕೋಟಿಗಿಂತ ಅಧಿಕ ಕರೆಗಳು ಬಂದಿದ್ದು, ಇದರಿಂದ 8.09 ಲಕ್ಷ ಜೀವಗಳನ್ನು ಉಳಿಸಲು ಸಹಾಯವಾಗಿದೆ. 1 ಕೋಟಿಗಿಂತ ಅಧಿಕ ಶಾಲಾ ಮಕ್ಕಳ ವಾರ್ಷಿಕ ಉಚಿತ ಆರೋಗ್ಯ ತಪಾಸಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ 327 ವೈದ್ಯರು ಹಾಗೂ 3922 ಅರೆ ವೈದ್ಯಕೀಯ ಸಿಬ್ಬಂದಿ ನೇಮಕಗೊಂಡಿದ್ದಾರೆ.

ಮಹಿಳೆಯರ ಸಬಲೀಕರಣ:

32. ನನ್ನ ಸರ್ಕಾರವು, ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡಿದೆ. ಭಾಗ್ಯಲಕ್ಷ್ಮಿ ಯೋಜನೆಯಡಿ 12 ಲಕ್ಷ ಫಲಾನುಭವಿಗಳನ್ನು ತರಲಾಗಿದ್ದು, ಪ್ರಸಕ್ತ ವರ್ಷದಲ್ಲಿ ಮಕ್ಕಳಿಗೆ ಸಮಗ್ರ ಉಚಿತ ವೈದ್ಯಕೀಯ ತಪಾಸಣೆಯನ್ನು ನಡೆಸಲಾಯಿತು. ಇದರೊಂದಿಗೆ ಅಕ್ಟೋಬರ್–ನವೆಂಬರ್ 2010ರಲ್ಲಿ ತಾಯಂದಿರಿಗೆ ತಿಳುವಳಿಕೆ ನೀಡುವ ಹಾಗೂ ಪ್ರೋತ್ಸಾಹಿಸುವ ಕಾರ್ಯಕ್ರಮವನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕೈಗೊಳ್ಳಲಾಯಿತು.

33. ಸ್ತ್ರೀಶಕ್ತಿ ಕಾರ್ಯಕ್ರಮದಡಿ 21 ಲಕ್ಷ ಮಹಿಳಾ ಸದಸ್ಯರನ್ನು ಒಳಗೊಂಡಿರುವ 1.40 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಈ ಗುಂಪುಗಳು ಸುಮಾರು ರೂ. 870 ಕೋಟಿ ಮೊತ್ತವನ್ನು ಉಳಿತಾಯ ಮಾಡಿವೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ:

34. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಕಲ್ಯಾಣವು ನನ್ನ ಸರ್ಕಾರದ ಆದ್ಯತೆಯ ವಿಷಯವಾಗಿದೆ. ಈ ವರ್ಷದಲ್ಲಿ 200 ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು 10 ಜಿಲ್ಲೆಗಳಲ್ಲಿ ರೂ. 20 ಕೋಟಿ ವೆಚ್ಚದಲ್ಲಿ ಬಾಬು ಜಗಜೀವನ್‌ರಾಂ ಭವನಗಳನ್ನು ನಿರ್ಮಿಸಲಾಗುತ್ತಿದೆ. ಹಾಗೂ ರೂ. 20 ಕೋಟಿ ವೆಚ್ಚದಲ್ಲಿ 11 ಮಾದರಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ.

35. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗಗಳಿಗೆ ಸೇರಿದ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿರುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು 547 ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಇದರಿಂದ ಸುಮಾರು 70,000 ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ.

36. ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು 2010–2011ರಲ್ಲಿ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ರೂ. 148 ಕೋಟಿಗಳನ್ನು ಮೀಸಲಿರಿಸಿದೆ. ಅಂತೆಯೇ ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ರೂ. 140 ಕೋಟಿಗಳನ್ನು ಹಂಚಿಕೆ ಮಾಡಿದೆ ಮತ್ತು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಸಾಲ ನೀಡುವುದಕ್ಕಾಗಿ ಪ್ರಸಕ್ತ ವರ್ಷದಲ್ಲಿ ರೂ. 70 ಕೋಟಿಗಳನ್ನು ಒದಗಿಸಿದೆ.

ಅಲ್ಪಸಂಖ್ಯಾತ ವರ್ಗಗಳ ಕಲ್ಯಾಣ:

37. ನನ್ನ ಸರ್ಕಾರವು, ಅಲ್ಪಸಂಖ್ಯಾತ ವರ್ಗಗಳ ಕಲ್ಯಾಣಕ್ಕೆ ಬದ್ಧವಾಗಿದೆ. ಪ್ರಸಕ್ತ ವರ್ಷದಲ್ಲಿ ಅವರ ಕಲ್ಯಾಣಕ್ಕಾಗಿ ರೂ. 251 ಕೋಟಿಗಳನ್ನು ಮೀಸಲಿರಿಸಿದ್ದು, ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇದು ಅತ್ಯಂತ ಹೆಚ್ಚಿನ ಮೊತ್ತವಾಗಿದೆ.

38. ಶುಶ್ರೂಷಾ ಕ್ಷೇತ್ರ, ಗಣಕಯಂತ್ರ ತರಬೇತಿ, ಪ್ಲಾಸ್ಟಿಕ್ ತಂತ್ರಜ್ಞಾನ ಮುಂತಾದವುಗಳಲ್ಲಿ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ವೃತ್ತಿಪರ ತರಬೇತಿಯನ್ನು ನೀಡಲಾಗುತ್ತಿದೆ. 2010–2011ರಲ್ಲಿ ರೂ. 10 ಕೋಟಿಗಳನ್ನು ಈ ಉದ್ದೇಶಕ್ಕಾಗಿ ಮೀಸಲಿರಿಸಿದ್ದು, ಇದರಿಂದ ಈವರೆಗೆ 4580 ಅಭ್ಯರ್ಥಿಗಳು ಪ್ರಯೋಜನ ಪಡೆದಿದ್ದಾರೆ.

39. ವಕ್ಫ್ ಸ್ವತ್ತಿನ ಸಮೀಕ್ಷೆಗಾಗಿ ವಿಶೇಷ ಕಾರ್ಯಪಡೆಯನ್ನು ಸೃಜಿಸಲಾಗಿದೆ. ಹಜ್ ಮಹಲ್ ಕಟ್ಟಡವನ್ನು ನಿರ್ಮಿಸಬೇಕೆಂಬ ಬಹುದಿನಗಳ ಬೇಡಿಕೆಯನ್ನು ನನ್ನ ಸರ್ಕಾರವು ನೆರವೇರಿಸಿದ್ದು, ಅದಕ್ಕಾಗಿ ಭೂಮಿಯನ್ನು ಖರೀದಿಸಲು ರೂ. 5 ಕೋಟಿಗಳನ್ನು ಮಂಜೂರು ಮಾಡಿದೆ.

ಗ್ರಾಮೀಣಾಭಿವೃದ್ಧಿ:

40. ನನ್ನ ಸರ್ಕಾರವು, ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಹೆಚ್ಚಿನ ಆದ್ಯತೆ ನೀಡುವುದನ್ನು ಮುಂದುವರಿಸಿದೆ. ಸುಮಾರು 19 ಲಕ್ಷ ಜನರಿಗೆ ಉದ್ಯೋಗ ನೀಡುವ ಮೂಲಕ ಸುಮಾರು 2.33 ಕೋಟಿ ಮಾನವ ದಿನಗಳ ಉದ್ಯೋಗವನ್ನು ಸೃಜಿಸಲಾಗಿದೆ.

41. ಗ್ರಾಮೀಣಾಭಿವೃದ್ಧಿ ವಲಯದ ವಿವಿಧ ಯೋಜನೆಗಳ ಉತ್ತಮ ಅನುಷ್ಠಾನಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ 2500 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಮತ್ತು 453 ಗ್ರಾಮ ಪಂಚಾಯತ್ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.

42. 2010–2011ನೇ ಸಾಲಿನಲ್ಲಿ, ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ರೂ. 650 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಇದರ ಜೊತೆಗೆ, ನನ್ನ ಸರ್ಕಾರವು ಒಟ್ಟು ರೂ. 3000 ಕೋಟಿಗಳ ಅಂದಾಜು ವೆಚ್ಚದಲ್ಲಿ, ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ 20 ಕಿ.ಮೀ. ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವ ಯೋಜನೆಯೊಂದಕ್ಕೆ ಇತ್ತೀಚೆಗೆ ಅನುಮೋದನೆ ನೀಡಿದೆ.

43. 483 ಗ್ರಾಮೀಣ ವಸತಿ ಪ್ರದೇಶಗಳಿಗೆ ಮತ್ತು ಯೋಗ್ಯ ಗುಣಮಟ್ಟದ ನೀರು ಲಭ್ಯವಿಲ್ಲದ 177 ವಸತಿ ಪ್ರದೇಶಗಳಿಗೆ ಸಾಕಷ್ಟು ಮತ್ತು ಸುರಕ್ಷಿತ ಕುಡಿಯುವ ನೀರು ಒದಗಿಸುವುದಕ್ಕಾಗಿ ರೂ. 271 ಕೋಟಿ ಖರ್ಚು ಮಾಡಲಾಗಿದೆ.

44. ಸುವರ್ಣ ಗ್ರಾಮೋದಯ ಯೋಜನೆ ಅಡಿಯಲ್ಲಿ 53 ಗ್ರಾಮಗಳಲ್ಲಿ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.208 ಕೋಟಿಗಳನ್ನು ಖರ್ಚು ಮಾಡಲಾಗಿದೆ.

45. "ಪಂಚತಂತ್ರ" ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಅದರಲ್ಲಿ ಗ್ರಾಮ ಪಂಚಾಯತ್‌ನ ಲೆಕ್ಕಪತ್ರಗಳು ಹಾಗೂ ಇತರ ಸಂಬಂಧಪಟ್ಟ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

46. ರಾಜ್ಯದಲ್ಲಿ ಪಂಚಾಯತ್ ಸಂಸ್ಥೆಗಳ ಸಶಕ್ತೀಕರಣವನ್ನು ಗುರುತಿಸಿ ಕೇಂದ್ರ ಸರ್ಕಾರವು 2009–2010ನೇ ಸಾಲಿನ ಪಂಚಾಯತ್ ಸಂಸ್ಥೆಗಳ ಸಶಕ್ತೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹಕ ಯೋಜನೆಯ ಅಡಿಯಲ್ಲಿ ರಾಜ್ಯಕ್ಕೆ ಪ್ರಥಮ ಬಹುಮಾನ ನೀಡಿದೆ.

47. ನನ್ನ ಸರ್ಕಾರವು ಕೆಳಹಂತದ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಮಹಿಳೆಯರನ್ನು ಸಶಕ್ತಗೊಳಿಸುವ ಮತ್ತು ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಸಲುವಾಗಿ ಪಂಚಾಯತ್ ರಾಜ್

ಸಂಸ್ಥೆಗಳ ಎಲ್ಲ ಮೂರು ಹಂತಗಳಲ್ಲಿನ ಎಲ್ಲ ಸ್ಥಾನಗಳಲ್ಲಿ ಮತ್ತು ಹುದ್ದೆಗಳಲ್ಲಿ ಮಹಿಳೆಯರಿಗಾಗಿ ಮೀಸಲಿರಿಸಿದ ಪ್ರಮಾಣವನ್ನು ಶೇ. 50ಕ್ಕೆ ಹೆಚ್ಚಿಸಿದೆ.

ಉದ್ಯೋಗ ಮೇಳ:

48. ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮವು 21 ಕೌಶಲ್ಯ ಮತ್ತು ಉದ್ಯೋಗ ಮೇಳಗಳನ್ನು ಮತ್ತು 147 ಸಣ್ಣ ಉದ್ಯೋಗ ಮೇಳಗಳನ್ನು ಸಂಘಟಿಸಿದೆ. ಈ ಮೂಲಕ 3 ಲಕ್ಷಕ್ಕೂ ಹೆಚ್ಚಿನ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ನೀಡಿದೆ ಮತ್ತು 2.9 ಲಕ್ಷ ಅಭ್ಯರ್ಥಿಗಳಿಗೆ ಉದ್ಯೋಗವನ್ನು ಕಲ್ಪಿಸಿದೆ. ವಿಕಲ ಚೇತನರಿಗೆ ಬೆಂಗಳೂರಿನಲ್ಲಿ ಒಂದು ವಿಶೇಷ ಉದ್ಯೋಗ ಮೇಳವನ್ನು ಸಂಘಟಿಸಲಾಗಿತ್ತು, ಅದರಲ್ಲಿ 3000ಕ್ಕೂ ಹೆಚ್ಚು ವಿಕಲ ಚೇತನ ಅಭ್ಯರ್ಥಿಗಳು ಪಾಲ್ಗೊಂಡಿದ್ದರು ಮತ್ತು ಸುಮಾರು 500 ಅಭ್ಯರ್ಥಿಗಳು ಉದ್ಯೋಗವನ್ನು ಪಡೆದರು.

49. ದೇಶದಲ್ಲೇ ಮೊದಲ ಬಾರಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ ಮತ್ತು ಈಗ ಮಂಗಳೂರಿನಲ್ಲಿ ಮತ್ತು ಬಿಜಾಪುರದಲ್ಲಿ ತಲಾ ಒಂದರಂತೆ ಎರಡು ಕೇಂದ್ರಗಳು ಕಾರ್ಯಾರಂಭ ಮಾಡಿವೆ ಮತ್ತು ಪ್ರಸಕ್ತ ಹಣಕಾಸು ವರ್ಷದೊಳಗೆ ಆರು ಕೇಂದ್ರಗಳನ್ನು ಸ್ಥಾಪಿಸಲಾಗುವುದು.

50. ಕೌಶಲ್ಯ ತರಬೇತಿ ಮತ್ತು ಉದ್ಯೋಗವನ್ನು ಒದಗಿಸುವುದಕ್ಕಾಗಿ ನನ್ನ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ.

- ಜರ್ಮನಿಯ ಜಿಟಿಜೆಡ್–ಐಎಸ್ ಕಂಪನಿಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಹಾಗೂ ಗುಲ್ಬರ್ಗಾದಲ್ಲಿ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ,
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಇ–ಕಲಿಕೆಗೆ ಪ್ರಯೋಗಾಲಯಗಳು,
- ಪದವಿ ವಿದ್ಯಾರ್ಥಿಗಳಿಗಾಗಿ ಸಹಯೋಗ ಕಾರ್ಯಕ್ರಮ,

- 114 ತಾಲ್ಲೂಕುಗಳ 228 ಶಾಲೆಗಳಲ್ಲಿ ವೃತ್ತಿ ಮಾರ್ಗದರ್ಶಿ ಕೇಂದ್ರಗಳು,
- ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ವಿಶೇಷ ಕೌಶಲ್ಯ ತರಬೇತಿ ಮತ್ತು ಉದ್ಯೋಗ ಆಂದೋಲನ.

ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆ:

51. ನನ್ನ ಸರ್ಕಾರವು ಶಿಕ್ಷಣಕ್ಕೆ ಅತ್ಯಂತ ಆದ್ಯತೆ ನೀಡುತ್ತದೆ. ನಾವು ಈ ವರ್ಷ 100 ಪ್ರಥಮ ದರ್ಜೆ ಸರ್ಕಾರಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗಗಳನ್ನು ಪ್ರಾರಂಭಿಸಿದ್ದೇವೆ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳು ವಿಜ್ಞಾನ ಹಾಗೂ ಗಣಿತವನ್ನು ಅಭ್ಯಾಸ ಮಾಡಲು ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲು ಸಹಾಯಕವಾಗುತ್ತದೆ.

52. 2010–2011ರಲ್ಲಿ ನಾವು ಮೂರು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದೇವೆ. ಅವೆಂದರೆ, ಬೆಳಗಾವಿಯಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬಳ್ಳಾರಿಯಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಮತ್ತು ಮೈಸೂರಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರ್ಯವಿಧಾನವನ್ನು ಸಿದ್ಧಪಡಿಸಲು ವಿಶೇಷಾಧಿಕಾರಿಯನ್ನು ನೇಮಿಸಿದ್ದೇವೆ.

53. ಪ್ರಸಕ್ತ ವರ್ಷದಲ್ಲಿ ನಾವು ಉನ್ನತ ಶಿಕ್ಷಣ ಪರಿಷತ್ತು ಅಧಿನಿಯಮವನ್ನು ರಚಿಸಿ, ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪಿಸಿದ್ದು ಅದು ಪೂರ್ಣವಾಗಿ ಕಾರ್ಯಾರಂಭ ಮಾಡಿದೆ. ಈ ಪರಿಷತ್ತು ಹಾಗೂ ಜ್ಞಾನ ಆಯೋಗ ಶಿಕ್ಷಣ ಕ್ಷೇತ್ರದಲ್ಲಿ ಸೂಕ್ತ ಮಾರ್ಗದರ್ಶನ ನೀಡುತ್ತಿವೆ.

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಂವರ್ಧನೆ:

54. ನನ್ನ ಸರ್ಕಾರವು, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪೋಷಣೆ, ಸಂವರ್ಧನೆ ಮತ್ತು ಸಂರಕ್ಷಣೆ ಮಾಡುವತ್ತ ನಿರಂತರ ಪ್ರಯತ್ನವನ್ನು ಮಾಡುತ್ತಿದೆ. ಮೇಲ್ಕಂಡ ಉದ್ದೇಶವನ್ನು ಪ್ರೋತ್ಸಾಹಿಸಲು ರಾಜ್ಯದ ವಿವಿಧ ಸ್ಥಳಗಳಲ್ಲಿ 11 ಉತ್ಸವಗಳನ್ನು ಆಯೋಜಿಸಲಾಗಿದೆ. ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕೃತಿಗಳನ್ನು ಭಾಷಾಂತರಿಸುವುದಕ್ಕಾಗಿ ರೂ. 1 ಕೋಟಿ ಬಿಡುಗಡೆ ಮಾಡಲಾಗಿದೆ. ಕನ್ನಡದಲ್ಲಿ ಒಂದು ಅಂತರ್ಜಾಲತಾಣವನ್ನು ರೂಪಿಸುವ ಸಂಬಂಧ ಒಂದು ಸಮಿತಿ ಕಾರ್ಯನಿರ್ವಹಿಸುತ್ತಿದೆ.

55. ದಿವಂಗತ ಡಾ॥ ರಾಜ್‌ಕುಮಾರ್ ಅವರ ನೆನಪಿಗಾಗಿ ಸ್ಮಾರಕವನ್ನು ನಿರ್ಮಿಸುವ ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡಿದ್ದು, ಅದು ಉದ್ಘಾಟನೆಗೆ ಸಿದ್ಧವಾಗಿದೆ. ದಿವಂಗತ ಡಾ॥ ವಿಷ್ಣುವರ್ಧನ್‌ರವರ ನೆನಪಿಗಾಗಿ ಸ್ಮಾರಕವನ್ನು ನಿರ್ಮಿಸುವ ಸಲುವಾಗಿ ಭೂಮಿಯನ್ನು ಖರೀದಿಸಲು ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಸ್ಮಾರಕ ನಿರ್ಮಾಣ ಕಾರ್ಯ ಶೀಘ್ರದಲ್ಲೇ ಪ್ರಾರಂಭವಾಗಲಿದೆ.

56. ಕರ್ನಾಟಕದ ಪ್ರಗತಿಯ ಉತ್ಸವಾಚರಣೆ ಮಾಡಲು 2011ರ ಮಾರ್ಚ್ ತಿಂಗಳಲ್ಲಿ ಬೆಳಗಾಂನಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಸಮ್ಮೇಳನವನ್ನು ನಡೆಸಲು ರೂ.30 ಕೋಟಿ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದ್ದು, ಆ ಪೈಕಿ ರೂ.10 ಕೋಟಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

57. ಭಾರತ ಸರ್ಕಾರವು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿದೆ. ಕನ್ನಡ ಭಾಷೆಯ ಅಭಿವೃದ್ಧಿಗಾಗಿ ರಾಜ್ಯದಲ್ಲಿರುವ 11 ವಿಶ್ವವಿದ್ಯಾಲಯಗಳ ಪೈಕಿ ಪ್ರತಿಯೊಂದಕ್ಕೂ ರೂ.1 ಕೋಟಿ ಅನುದಾನವನ್ನು ನೀಡಿದೆ. ಈ ವಿಶ್ವವಿದ್ಯಾಲಯಗಳು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉನ್ನತಿಗಾಗಿ ಯೋಜನೆಗಳನ್ನು ರೂಪಿಸಿವೆ. ಈ ಯೋಜನೆಗಳಲ್ಲಿ ಆಗಿರುವ ಪ್ರಗತಿಯನ್ನು ಆಧರಿಸಿ, ನನ್ನ ಸರ್ಕಾರವು ಈ ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿಯಾಗಿ ರೂ.1 ಕೋಟಿಯನ್ನು ಬಿಡುಗಡೆ ಮಾಡಲು ಬದ್ಧವಾಗಿದೆ.

58. ನನ್ನ ಸರ್ಕಾರವು ಸಂಸ್ಕೃತ ಭಾಷೆಗೆ ಉತ್ತೇಜನ ನೀಡಲು ಸಹ ಕ್ರಮಗಳನ್ನು ಕೈಗೊಳ್ಳುತ್ತಿದೆ. ಬೆಂಗಳೂರಿನಲ್ಲಿ ಈ ತಿಂಗಳು ನಡೆಯಲಿರುವ ವಿಶ್ವ ಸಂಸ್ಕೃತ ಪುಸ್ತಕ ಮೇಳವನ್ನು ಪ್ರಾಯೋಜಿಸುವುದು ಮತ್ತು ಸಂಸ್ಕೃತ ಭಾಷೆಗೆ ಪ್ರತ್ಯೇಕ ವಿಕಿಪೀಡಿಯಾವನ್ನು ಅಭಿವೃದ್ಧಿಗೊಳಿಸುವುದಕ್ಕೆ ಬೆಂಬಲ ನೀಡುವುದು ನನ್ನ ಸರ್ಕಾರ ಕೈಗೊಂಡಿರುವ ಇನ್ನು ಕೆಲವು ಕ್ರಮಗಳಾಗಿವೆ.

ಪ್ರವಾಸೋದ್ಯಮ – ಒಂದು ರಾಜ್ಯ ಹಲವು ವಿಶ್ವ:

59. ಕರ್ನಾಟಕವು ಭಾರತೀಯ ಮತ್ತು ವಿದೇಶಿ ಪ್ರವಾಸಿಗರಿಗೆ ನೆಚ್ಚಿನ ತಾಣವಾಗಿದೆ. ಪ್ರವಾಸೋದ್ಯಮವನ್ನು ಒಂದು ಆಕರ್ಷಕ ಉದ್ಯಮವನ್ನಾಗಿ ಮಾಡುವ ನಿಟ್ಟಿನಲ್ಲಿ ನನ್ನ ಸರ್ಕಾರವು ಒಂದು ಕ್ರೀಯಾಶೀಲ ನಿಲುವನ್ನು ಅಳವಡಿಸಿಕೊಂಡಿದೆ. ಹೊಸ ಪ್ರವಾಸೋದ್ಯಮ ನೀತಿ 2009–2014ನ್ನು ಪ್ರಕಟಿಸಲಾಗಿದೆ. ವಿಶ್ವ ಹೂಡಿಕೆದಾರರ ಸಮಾವೇಶದ ಸಂದರ್ಭದಲ್ಲಿ ಥೀಂ ಪಾರ್ಕ್‌ಗಳು ಹಾಗೂ ರೆಸಾರ್ಟ್‌ಗಳನ್ನು ಸ್ಥಾಪಿಸಲು ಮತ್ತು ಇತರ ಪ್ರವಾಸೋದ್ಯಮ ಸಂಬಂಧಿ ಯೋಜನೆಗಳನ್ನು ರೂಪಿಸಲು ರೂ. 21,000 ಕೋಟಿಗಳ ಸಂಭಾವ್ಯ ಹೂಡಿಕೆಯ ಪ್ರಸ್ತಾವವನ್ನು ಸ್ವೀಕರಿಸಲಾಗಿದೆ. ಸಮಗ್ರ ಪ್ರವಾಸೋದ್ಯಮ ನೀತಿಯ ಅಡಿಯಲ್ಲಿ ಮುಂದಿನ 5 ವರ್ಷಗಳ ಅವಧಿಯಲ್ಲಿ ರೂ. 25,000 ಕೋಟಿ ಹೂಡಿಕೆಯನ್ನು ಆಕರ್ಷಿಸಲು ಉದ್ದೇಶಿಸಲಾಗಿದೆ. ಈ ಹೂಡಿಕೆಗಳು ರಾಜ್ಯದಲ್ಲಿ 41 ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುವುದೆಂದು ನಿರೀಕ್ಷಿಸಲಾಗಿದೆ.

ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವುದು:

60. ಕಬ್ಬಿಣದ ಅದಿರಿಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆ ಇದ್ದ ಕಾರಣದಿಂದ ಹಲವಾರು ವರ್ಷಗಳಿಂದ ಕಬ್ಬಿಣದ ಅದಿರಿನ ರಫ್ತು ಅವ್ಯಾಹತವಾಗಿ ನಡೆಯುತ್ತಿತ್ತು. ರಾಜ್ಯದಿಂದ ಕಬ್ಬಿಣದ ಅದಿರಿನ ಅಕ್ರಮ ರಫ್ತನ್ನು ಕೊನೆಗಾಣಿಸಲು, ರಾಜ್ಯ ಸರ್ಕಾರವು ರಾಜ್ಯದಿಂದ ಕಬ್ಬಿಣದ ಅದಿರನ್ನು ರಫ್ತು ಮಾಡಲು ಪರ್ಮಿಟ್‌ಗಳ ನೀಡಿಕೆಯನ್ನು ನಿಷೇಧಿಸುವ ಅಭೂತಪೂರ್ವ ಕ್ರಮವನ್ನು ತೆಗೆದುಕೊಂಡಿದೆ. ಸರ್ಕಾರದ ಈ ತೀರ್ಮಾನವು ಖನಿಜ ವಲಯದ ಮೌಲ್ಯವರ್ಧನೆಯ ಮತ್ತು ಕಬ್ಬಿಣದ ಅದಿರನ್ನು ರಾಜ್ಯದೊಳಗೇ ಬಳಕೆ ಮಾಡುವುದನ್ನು ಪ್ರೋತ್ಸಾಹಿಸುವ ನೀತಿಗೆ ಅನುಗುಣವಾಗಿದೆ. ರಫ್ತು ಪರ್ಮಿಟ್ಟುಗಳ ನೀಡಿಕೆಯನ್ನು ನಿಷೇಧಿಸುವ ಸರ್ಕಾರದ ಈ ನಿರ್ಧಾರವನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಎತ್ತಿ ಹಿಡಿದಿದೆ.

61. ಅಲ್ಲದೆ, ರಾಜ್ಯ ಸರ್ಕಾರವು, ಈ ಮುಂದಿನ ಕ್ರಮಗಳೂ ಸೇರಿದಂತೆ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯ ಚಟುವಟಿಕೆಗಳನ್ನು ಹತ್ತಿಕ್ಕಲು ಇತರ ಹಲವು ಕ್ರಮಗಳನ್ನು ಕೈಗೊಂಡಿದೆ.

- ಬಾರ್ ಕೋಡಿಂಗ್ ಮತ್ತು ಹಾಲೋಗ್ರಾಂ ಆಧಾರಿತ ಟ್ರಿಪ್‌ಶೀಟ್ ಪದ್ಧತಿಯ ಪ್ರಾರಂಭ,
- ಉತ್ತಮ ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ರಾಜ್ಯದ ಹಲವು ಸ್ಥಳಗಳಲ್ಲಿ 13 ಸಮಗ್ರ ತನಿಖಾ ಠಾಣೆಗಳ ಪ್ರಾರಂಭ,
- ಗಣಿ ಪ್ರದೇಶಗಳ ಅನಧಿಕೃತ ಒತ್ತುವರಿ ಪತ್ತೆಗೆ ಅತ್ಯಧಿಕ ಸ್ಪಷ್ಟತೆಯುಳ್ಳ ಉಪಗ್ರಹ ಮಾಹಿತಿ ಬಳಕೆ,
- ಮಿತಿಮೀರಿದ ಭಾರ ಹೇರಿರುವ ವಾಹನಗಳನ್ನು ಸಂಚಾರದಲ್ಲಿರುವಾಗ ತಪಾಸಣೆ ಮಾಡುವ ಸಲುವಾಗಿ 10 ಸಂಖ್ಯೆಯ ತೂಕ ಮಾಡುವ ಹಾಗೂ ಸ್ವಯಂ ಚಾಲಿತ ಸಂಚಾರ ಕೌಂಟರ್ ಕ್ಲಾಸಿಫೈಯರ್‌ಗಳ ಸ್ಥಾಪನೆ,
- ಗಣಿಗಳಲ್ಲಿ ಕಬ್ಬಿಣದ ಅದಿರನ್ನು ಭರ್ತಿ ಮಾಡಿದ ಸ್ಥಳದಲ್ಲಿಯೇ ಭರ್ತಿ ಮಾಡಲಾದ ಕಬ್ಬಿಣದ ಅದಿರಿನ ತೂಕ ಪರೀಕ್ಷಿಸಲು ಕ್ರಮ.

62. ಇಷ್ಟೇ ಅಲ್ಲದೆ, ರಾಜ್ಯ ಸರ್ಕಾರವು ಕಬ್ಬಿಣದ ಅದಿರಿನ ಅಕ್ರಮ ಸಾಗಾಣಿಕೆಗೆ ವಾಹನ ಜಪ್ತಿ ಮಾಡುವುದು, ಇತ್ಯಾದಿ ಭಾರೀ ದಂಡಗಳನ್ನು ವಿಧಿಸಲು ಪ್ರಸ್ತುತ ಇರುವ ನಿಯಮಗಳನ್ನು ಸಹ ತಿದ್ದುಪಡಿ ಮಾಡುತ್ತಿದೆ.

ಮೂಲಸೌಕರ್ಯ ಅಭಿವೃದ್ಧಿ:

63. ರಾಜ್ಯದ ಅಭಿವೃದ್ಧಿಯಲ್ಲಿ ಉತ್ತಮ ಸಂಪರ್ಕ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಗಮನಕ್ಕೆ ತೆಗೆದುಕೊಂಡು ನನ್ನ ಸರ್ಕಾರವು, 13,718 ಕಿಲೋ ಮೀಟರ್ ರಸ್ತೆಯ ಸುಧಾರಣೆಗೆ ರೂ. 1373 ಕೋಟಿಗಳನ್ನು ಖರ್ಚು ಮಾಡಿದೆ.

64. 2009ರ ಅಕ್ಟೋಬರ್‌ನಲ್ಲಿ ಉತ್ತರ ಕರ್ನಾಟಕದಲ್ಲಿ ಉಂಟಾದ ತೀವ್ರ ನೆರೆಹಾವಳಿಯ ಅವಧಿಯಲ್ಲಿ ಹಾನಿಗೊಂಡ 167 ಸೇತುವೆಗಳ ಪುನರ್ ನಿರ್ಮಾಣ ಕಾರ್ಯವನ್ನು ನಬಾರ್ಡ್ ಸಾಲದ ನೆರವಿನೊಂದಿಗೆ

ರೂ. 130 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಇವುಗಳ ಪೈಕಿ 145 ಸೇತುವೆ ಕಾಮಗಾರಿಗಳನ್ನು ಈಗಾಗಲೇ ಅನುಮೋದಿಸಲಾಗಿದೆ ಮತ್ತು ಕಾಮಗಾರಿ ಶೀಘ್ರದಲ್ಲೇ ಪ್ರಾರಂಭಗೊಳ್ಳಲಿದೆ.

65. ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ತನ್ನ ಸಾಮರ್ಥ್ಯವನ್ನು ಬಹುತೇಕ ದ್ವಿಗುಣಗೊಳಿಸಲು ವಿಮಾನ ನಿಲ್ದಾಣದ ವಿಸ್ತರಣೆ ಮತ್ತು ಸಂಬಂಧಿಸಿದ ಸೌಲಭ್ಯಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವುದರಲ್ಲಿದೆ. ಶಿವಮೊಗ್ಗ, ಗುಲ್ಬರ್ಗಾ, ಬಿಜಾಪುರ ಮತ್ತು ಹಾಸನ ನಗರಗಳಲ್ಲಿ ಸಣ್ಣ ವಿಮಾನ ನಿಲ್ದಾಣಗಳನ್ನು ಖಾಸಗಿ ಪ್ರವರ್ತಕರ ಮೂಲಕ ಸಾರ್ವಜನಿಕ– ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗುತ್ತಿದೆ.

66. ನನ್ನ ಸರ್ಕಾರವು, ಬೆಂಗಳೂರು ಮೆಟ್ರೋ ರೈಲು ವ್ಯವಸ್ಥೆಗೆ ಅತಿ ಹೆಚ್ಚಿನ ಆದ್ಯತೆ ನೀಡಿದೆ. ಇದುವರೆಗೂ ರೂ. 2600 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬೈಯ್ಯಪ್ಪನ ಹಳ್ಳಿಯಿಂದ ಮಹಾತ್ಮಗಾಂಧಿ ರಸ್ತೆವರೆಗಿನ (ರೀಚ್–1) ಪೂರ್ವ ರೈಲು ಮಾರ್ಗದ ಮೇಲುಸ್ತರದ ಸಿವಿಲ್ ಕಾಮಗಾರಿಗಳು ಗಣನೀಯವಾಗಿ ಪೂರ್ಣಗೊಂಡಿವೆ ಮತ್ತು ಮೊದಲ ರೈಲು ಬೋಗಿಗಳ ಪರೀಕ್ಷಾರ್ಥ ಸಂಚಾರವು ಈ ಹಂತದಲ್ಲಿ ಈಗಾಗಲೇ ನಡೆದಿದೆ. ಸುರಕ್ಷತಾ ಪ್ರಮಾಣೀಕರಣ ಪೂರ್ಣಗೊಂಡ ಮೇಲೆ, 2011ರ ಜನವರಿ ನಂತರ ಯಾವುದೇ ಸಮಯದಲ್ಲಿ ಈ ಮಾರ್ಗ ವಾಣಿಜ್ಯ ಬಳಕೆಗೆ ಸಿದ್ಧವಾಗುತ್ತದೆ. ಯೋಜನೆಯ ಉಳಿದ ಭಾಗವು ನಿಗದಿಯಾದಂತೆ 2013ರ ವೇಳೆಗೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಎರಡನೇ ಹಂತದಲ್ಲಿ 51.3 ಕಿಲೋ ಮೀಟರ್‌ಗಳಷ್ಟು ದೂರದ ವಿಸ್ತರಣೆಗೆ ಯೋಜನಾ ವರದಿಯ ತಯಾರಿಕೆಯನ್ನು ಸಹ ಅನುಮೋದಿಸಿದೆ.

ನಗರಾಭಿವೃದ್ಧಿ:

67. ಆಸ್ತಿ ತೆರಿಗೆಯಲ್ಲಿ ನಿರಂತರ ಸುಧಾರಣೆ ಕಂಡುಬಂದಿರುವ ಕಾರಣದಿಂದಾಗಿ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಗಳ ವ್ಯಾಪ್ತಿ ವಿಸ್ತರಿಸಲು ಹಾಗೂ ಸಂಗ್ರಹಣೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ. ಇದರ ಪರಿಣಾಮವಾಗಿ ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆಯೊಂದರಲ್ಲೇ ತೆರಿಗೆ ಸಂಗ್ರಹಣೆಯು ರೂ. 258 ಕೋಟಿಯಿಂದ ರೂ. 947 ಕೋಟಿಗೆ ಹೆಚ್ಚಿದೆ.

68. ಮೂಲಸೌಕರ್ಯಗಳನ್ನು ಅತ್ಯಧಿಕವಾಗಿ ಒದಗಿಸುವುದಕ್ಕಾಗಿ ಮತ್ತು ನೀರು ಪೂರೈಕೆ, ತ್ಯಾಜ್ಯ ನೀರು ನಿರ್ವಹಣೆ, ಘನ ತ್ಯಾಜ್ಯ ನಿರ್ವಹಣೆ ಹಾಗೂ ಮಳೆ ನೀರು ಚರಂಡಿ ನಿರ್ವಹಣೆ ಮುಂತಾದವುಗಳ ಸೇವೆಗಳ ಗುಣಮಟ್ಟವನ್ನು ನಿಗದಿಪಡಿಸಲು ಈ ವರ್ಷದಿಂದ ಪ್ರಮುಖ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಪ್ರತಿ ವರ್ಷವು ಸಾಧಿಸಬೇಕಾದ ಗುರಿಯನ್ನು ಸಹ ನಿಗದಿಪಡಿಸಲಾಗುವುದು. ಇದರಿಂದ ಮೂಲಸೌಕರ್ಯಗಳನ್ನು ಉತ್ತಮಗೊಳಿಸಲು ಮತ್ತು ಸೇವಾ ನೀಡಿಕೆಯನ್ನು ತ್ವರಿತಗೊಳಿಸಲು ಸಾಧ್ಯವಾಗುತ್ತದೆ.

ಭೂಮಿಗೆ ಸಂಬಂಧಿಸಿದ ಕ್ರಮಗಳು:

69. ನನ್ನ ಸರ್ಕಾರವು, "ಭೂ ಮಾಪನ ಅಭಿಯಾನ ಕಾರ್ಯಕ್ರಮ"ದ ಅಡಿಯಲ್ಲಿ ಪ್ರಸಕ್ತ ವರ್ಷದಲ್ಲಿ ಎಲ್ಲ ಸರ್ಕಾರಿ ಜಮೀನುಗಳನ್ನು ಮತ್ತು ಅವುಗಳ ಗಡಿಗಳನ್ನು ಗುರುತಿಸಲು ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ಈ ಉದ್ದೇಶಕ್ಕಾಗಿ ರೂ. 5 ಕೋಟಿಯನ್ನು ಈಗಾಗಲೇ ಮೀಸಲಿಡಲಾಗಿದೆ.

70. 26 ತಾಲ್ಲೂಕುಗಳಲ್ಲಿ ಭೂ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡಿದೆ. ಉಳಿದ ತಾಲ್ಲೂಕುಗಳಲ್ಲಿ ಸಹ ಹಂತಹಂತವಾಗಿ ಇದನ್ನು ಕೈಗೊಳ್ಳಲಾಗುವುದು.

ಇ-ಆಡಳಿತ ಹಾಗೂ ಮಾಹಿತಿ ತಂತ್ರಜ್ಞಾನ/ ಜೈವಿಕ ತಂತ್ರಜ್ಞಾನ ಕ್ರಮಗಳು :

71. ಮೈಸೂರು ಮತ್ತು ತುಮಕೂರು ಈ ಎರಡು ಜಿಲ್ಲೆಗಳಲ್ಲಿ 08-10-2010ರಂದು "ಆಧಾರ್" ಯೋಜನೆಯನ್ನು ಉದ್ಘಾಟಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ 5 ಲಕ್ಷಕ್ಕೂ ಹೆಚ್ಚು ನಿವಾಸಿಗಳು ಈಗಾಗಲೇ ನೋಂದಾಯಿಸಿಕೊಂಡಿದ್ದಾರೆ.

72. ರೈತರಿಗೆ ನೇರವಾಗಿ ಸಹಾಯಧನ ನೀಡುವ ಉದ್ದೇಶದಿಂದ ಇ-ಕ್ಲಿಯರೆನ್ಸ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

73. ಗ್ರಾಮೀಣ ಪ್ರದೇಶಗಳಿಗೆ ಮಾಹಿತಿ ತಂತ್ರಜ್ಞಾನವನ್ನು ವಿಸ್ತರಿಸುವ ಹಾಗೂ ಗ್ರಾಮೀಣ ಯುವಕರಿಗೆ ಉದ್ಯೋಗವನ್ನು ಕಲ್ಪಿಸುವ ಸಲುವಾಗಿ ರಾಜ್ಯದ

ಬೇರೆ ಬೇರೆ ಭಾಗಗಳಲ್ಲಿ 32 ಬಿಪಿಒ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

74. ಸರ್ಕಾರವು ರೂ. 25 ಕೋಟಿ ಅಂದಾಜು ವೆಚ್ಚದಲ್ಲಿ ಹೋಬಳಿಮಟ್ಟದಲ್ಲಿ 747 ರೈತ ಸಂಪರ್ಕ ಕೇಂದ್ರಗಳಲ್ಲಿ ಗಣಕೀಕರಣ ಮತ್ತು ಜಾಲತಾಣ (ವೆಬ್‌ಸೈಟ್) ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಂಡಿದೆ.

75. ನನ್ನ ಸರ್ಕಾರವು, ಪ್ರಾಯೋಗಿಕ ಆಧಾರದ ಮೇಲೆ ಆರು ಜಿಲ್ಲೆಗಳಲ್ಲಿ ಅಂದರೆ ಬಳ್ಳಾರಿ, ಗುಲ್ಬರ್ಗಾ, ಚಿತ್ರದುರ್ಗ, ಚಾಮರಾಜನಗರ, ಧಾರವಾಡ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಡಿ ಅರ್ಹ ವ್ಯಕ್ತಿಗಳಿಗೆ ಸ್ಮಾರ್ಟ್ ಕಾರ್ಡುಗಳನ್ನು ನೀಡಿದೆ. ರಾಜ್ಯದ ಎಲ್ಲ ಜಿಲ್ಲೆಗಳಿಗೆ ಯೋಜನೆಯನ್ನು ವಿಸ್ತರಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು.

76. ರಾಜ್ಯದಲ್ಲಿ ಮೊದಲ ಬಾರಿಗೆ ಪ್ರಾರಂಭಿಸಲಾದ ಸೆಮಿಕಂಡಕ್ಟರ್ ನೀತಿಯು ವಿದ್ಯುನ್ಮಾನ ವಲಯಕ್ಕೆ ಹೆಚ್ಚಿನ ಬಲವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಬೆಂಗಳೂರು, ಏಷ್ಯಾದಲ್ಲೇ ಸೆಮಿಕಂಡಕ್ಟರ್ ವಿನ್ಯಾಸ ಕಂಪನಿಗಳ ಅತಿ ದೊಡ್ಡ ತಾಣವಾಗಿದ್ದು, ಈ ವಲಯದ ಆದಾಯದ ಪೈಕಿ ಸುಮಾರು ಶೇ. 80ರಷ್ಟು ಆದಾಯ ಇದರಿಂದಲೇ ಬರುತ್ತಿದೆ. ಈ ವಲಯದ ಗಾತ್ರವು 2020ರ ವೇಳೆಗೆ ರಾಜ್ಯದಲ್ಲಿ ಸುಮಾರು ರೂ. 5 ಲಕ್ಷ ಕೋಟಿಗಳಿಗೆ ತಲುಪುವುದೆಂದು ಅಂದಾಜಿಸಲಾಗಿದೆ.

77. ನನ್ನ ಸರ್ಕಾರವು, ಮೈಸೂರು, ಮಂಗಳೂರು, ಧಾರವಾಡ ಮತ್ತು ಬೀದರ್‌ಗಳಲ್ಲಿ ವಲಯ ನಿರ್ದಿಷ್ಟ ಜೈವಿಕ ತಂತ್ರಜ್ಞಾನ ಪಾರ್ಕುಗಳನ್ನು ಸ್ಥಾಪಿಸಲು ಸಹ ಕ್ರಮ ಕೈಗೊಂಡಿದೆ. ನೇಮಕಯೋಗ್ಯ ಪದವೀಧರ/ ಸ್ನಾತಕೋತ್ತರ ಪದವೀಧರರನ್ನು ಜೈವಿಕ ತಂತ್ರಜ್ಞಾನ ಉದ್ಯಮಕ್ಕೆ ನೀಡುವ ಸಲುವಾಗಿ, ನನ್ನ ಸರ್ಕಾರವು ದೇಶದಲ್ಲೇ ಪ್ರಥಮ ಬಾರಿಗೆ ಈ ತೆರನಾದ 12 ಜೈವಿಕ ತಂತ್ರಜ್ಞಾನ ಫಿನಿಷಿಂಗ್ ಶಾಲೆಗಳನ್ನು ಮಂಜೂರು ಮಾಡಿದೆ.

ಸಾರಿಗೆ:

78. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಷ್ಟ್ರದಲ್ಲಿಯೇ ಜೆ-ನರ್ಮ್ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿರುವ ಪ್ರಥಮ ಸಾರಿಗೆ ಸಂಸ್ಥೆಯೆಂಬ ಪ್ರಶಂಸೆಗೆ ಪಾತ್ರವಾಗಿದೆ. ಕೇಂದ್ರ ಸರ್ಕಾರವು ಈ ಯೋಜನೆಯ ಅಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಆಂತರಿಕವಾಗಿ ವಿನ್ಯಾಸಗೊಳಿಸಿ ನಿರ್ಮಿಸಲಾಗಿರುವ ಕೆಳಮಟ್ಟ ಹೊಂದಿರುವ ಬಸ್‌ಗಳನ್ನು ಅತ್ಯುತ್ತಮ ಮಾದರಿ ಎಂಬುದಾಗಿ ಪ್ರಶಂಸಿಸಿದೆ ಹಾಗೂ ದೇಶದ ಇತರ ನಗರಗಳಲ್ಲಿ ಈ ಮಾದರಿಯನ್ನು ಅನುಷ್ಠಾನಕ್ಕೆ ತರುವಂತೆ ಸೂಚಿಸಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅತ್ಯಾಧುನಿಕ ಬಸ್ಸುಗಳ ನಿರ್ಮಾಣ, ನೌಕರಿ ಭರ್ತಿಯಲ್ಲಿ ಪಾರದರ್ಶಕತೆ, ಇತ್ಯಾದಿ ಸೇರಿದಂತೆ ಇತರ ಬೇರೆ ಬೇರೆ ಕ್ರಮಗಳಿಗಾಗಿ ಕೂಡ ಮೆಚ್ಚುಗೆಗೆ ಪಾತ್ರವಾಗಿದೆ.

79. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬೆಂ.ಮ.ಸಾ.ಸಂ.) ಇಡೀ ದೇಶದಲ್ಲೇ ಲಾಭಗಳಿಸುತ್ತಿರುವ ಏಕೈಕ ನಗರ ಸಾರಿಗೆ ಸಂಸ್ಥೆಯಾಗಿದೆ ಎಂಬುದನ್ನು ತಿಳಿಸಲು ನನಗೆ ಹರ್ಷವಾಗುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ – ಈ ಎರಡೂ ಸಂಸ್ಥೆಗಳು ಕಳೆದ ಎರಡು ವರ್ಷಗಳಲ್ಲಿ ಸಾಕಷ್ಟು ಸಂಖ್ಯೆಯ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿವೆ.

ಕ್ರೀಡೆಗಳಿಗೆ ಪ್ರೋತ್ಸಾಹ:

80. ಕರ್ನಾಟಕದ ಕ್ರೀಡಾಪಟುಗಳು ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆಲ್ಲುವುದರ ಮೂಲಕ ನಮಗೆ ಹೆಮ್ಮೆಯುಂಟು ಮಾಡಿದ್ದಾರೆ. ಈ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಕ್ರಮವಾಗಿ, ಸರ್ಕಾರವು ಚಿನ್ನದ ಪದಕ ವಿಜೇತರಿಗೆ ತಲಾ ರೂ. 10 ಲಕ್ಷ, ಬೆಳ್ಳಿ ಪದಕ ವಿಜೇತರಿಗೆ ತಲಾ ರೂ. 7 ಲಕ್ಷ ಮತ್ತು ಕಂಚಿನ ಪದಕ ವಿಜೇತರಿಗೆ ರೂ. 5 ಲಕ್ಷ ನಗದು ಪುರಸ್ಕಾರವನ್ನು ಮಂಜೂರು ಮಾಡಿದೆ. ನಮ್ಮ ರಾಜ್ಯದ 23 ಕ್ರೀಡಾಪಟುಗಳು ಇದರಿಂದ ಪ್ರಯೋಜನ ಪಡೆಯಲಿದ್ದಾರೆ.

ಪ್ರಶಸ್ತಿ ಮತ್ತು ಪುರಸ್ಕಾರಗಳು:

81. ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಕರ್ನಾಟಕದ ಪ್ರಯತ್ನಗಳಿಗೆ ಮನ್ನಣೆ ದೊರೆತಿದೆ ಎಂಬುದಾಗಿ ಘೋಷಿಸಲು ನನಗೆ ಸಂತೋಷವಾಗುತ್ತದೆ. ರಾಜ್ಯವು ಜೂನ್ 2010ಕ್ಕೆ ಮುಕ್ತಾಯಗೊಂಡ ತ್ರೈಮಾಸಿಕ ಅವಧಿಗೆ 20 ಅಂಶಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರಾಷ್ಟ್ರಮಟ್ಟದಲ್ಲೇ 2ನೇ ಸ್ಥಾನಕ್ಕೇರಿದೆ. ರಾಜ್ಯವು 'ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ (ಪಿಎಂಜಿಎಸ್‌ವೈ)' ಯ ಸಮಗ್ರ ಅನುಷ್ಠಾನದಲ್ಲಿ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗಳೆರಡು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಎನ್‌ಆರ್‌ಇಜಿ) ಕಾರ್ಯಕ್ರಮದ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ತೋರಿವೆ. ಇ-ಟೆಂಡರಿಂಗ್ ಮತ್ತು ಇ- ಸಂಗ್ರಹಣೆಯ ಕ್ರಮಕ್ಕೆ 'ಏಷ್ಯಾ ಪ್ರಶಸ್ತಿ' ದೊರೆತಿದೆ.

82. ಅಲ್ಲದೆ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಚಟುವಟಿಕೆಗಳು (ಎಡಬ್ಲ್ಯೂಟಿಎಆರ್) ಸಹ ಸಾರ್ವಜನಿಕ ವಲಯದಲ್ಲಿನ ಉತ್ತಮ ಮಾಹಿತಿ ತಂತ್ರಜ್ಞಾನ ಚಟುವಟಿಕೆಗಳಿಗಾಗಿ ಭಾರತ ಸರ್ಕಾರದ ಇ-ಆಡಳಿತ ಪ್ರಶಸ್ತಿಯನ್ನು ಗಳಿಸಿವೆ. 2,000 ಕ್ಕೂ ಹೆಚ್ಚು ಬಸ್ಸುಗಳಲ್ಲಿ ಬಯೋ ಡೀಸೆಲ್, ಎಥನಾಲ್ ಮತ್ತು ಬ್ಲೆಂಡೆಡ್ ಡೀಸೆಲ್‌ನಂಥ ಪರ್ಯಾಯ ಇಂಧನಗಳ ಬಳಕೆಗಾಗಿ ಗೋಲ್ಡನ್ ಪೀಕಾಕ್ ಇಕೋ-ಇನ್ನೋವೇಷನ್ ಅವಾರ್ಡ್, 'ಸುಜಲಾ ಜಲಾನಯನ' ಕಾರ್ಯಕ್ರಮಕ್ಕಾಗಿ ರಾಷ್ಟ್ರೀಯ ಜಲ ಪ್ರಶಸ್ತಿ ಮತ್ತು ಐದು ಜಿಲ್ಲೆಗಳಲ್ಲಿ ಸಾರ್ವಜನಿಕ- ಖಾಸಗಿ ಸಹಭಾಗಿತ್ವ ಪ್ರವರ್ಗದಡಿ ರಾಷ್ಟ್ರೀಯ ನಗರ ನೀರು ಪ್ರಶಸ್ತಿ 2009 – ಇವು ಕರ್ನಾಟಕ ಪಡೆದ ಇತರ ಕೆಲವು ಪ್ರಶಸ್ತಿಗಳ ಉದಾಹರಣೆಗಳಾಗಿವೆ.

83. ಪ್ರಗತಿಪರ ನೀತಿಗಳ ರಚನೆ ಮತ್ತು ಅಭಿವೃದ್ಧಿ ಕಾರ್ಯಸೂಚಿಯ ಅನುಷ್ಠಾನದಲ್ಲಿ ಎಲ್ಲ ಮಾನ್ಯ ಸದಸ್ಯರ ಸಹಕಾರವನ್ನು ನಾನು ಮತ್ತೊಮ್ಮೆ ಕೋರುತ್ತೇನೆ. ರಾಜ್ಯದ ಪ್ರಗತಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಾವೆಲ್ಲರೂ ಒಟ್ಟಾಗಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತೀರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಾವೆಲ್ಲರೂ

ಒಟ್ಟಾಗಿ ಕರ್ನಾಟಕವನ್ನು ರಾಷ್ಟ್ರದಲ್ಲೇ ಅತ್ಯಂತ ನಾಗರಿಕ ಸ್ನೇಹಿಯಾದ ಮತ್ತು ಪ್ರಗತಿಪರವಾದ ರಾಜ್ಯವನ್ನಾಗಿಸೋಣ.

"ಜೈ ಹಿಂದ್

ಜೈ ಕರ್ನಾಟಕ"

ಅಧ್ಯಕ್ಷರು: ಮಂಡಿಸಲಾಯಿತು. ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 12 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ 7–1–2011ರಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

* * * * *